## ಸಚಿವ ಸಂಪುಟದ ವಿಷಯಗಳನ್ನು ಮಾಧ್ಯಮಕ್ಕೆ ವಿವರಿಸಲು ಸಚಿವ ಸಂಪುಟದ ನಿರ್ಣಯದ ಕುರಿತು ಕಿರುಟಿಪ್ಪಣಿ ದಿನಾಂಕ: 21.12.2023

| ಕ್ರ.ಸಂ | ಸಚಿವ ಸಂಪುಟದ ವಿಷಯ **(Cabinet Subject)** | ವಿವರ **(Details)** | ಅಂಕಿ–ಸಂಖ್ಯೆ **(Statistics)** | ಸಂಪುಟದ ನಿರ್ಣಯ |
|---|---|---|---|---|
| 2 | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** ರಾಷ್ಟ್ರೀಯ ಉಚಿತ ರೋಗ ಪತ್ತೆ ಮತ್ತು ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದಡಿಯಲ್ಲಿ (NFDS) ವಿವಿಧ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿರುವ ಲ್ಯಾಬ್‌ಗಳಿಗೆ ಅಗತ್ಯವಿರುವ ರಾಸಾಯನಿಕಗಳು ಹಾಗೂ ಕಂಪ್ಯೂಟರ್ ರೇಡಿಯಾಗ್ರಫಿ ಸಿಸ್ಟಂಗಳಿಗೆ Dry Laser X ray Films ಮತ್ತು ಪರಿಕರಗಳನ್ನು ರೂ.50.15 ಕೋಟಿಗಳ ವೆಚ್ಚದಲ್ಲಿ ಖರೀದಿಸುವ ಬಗ್ಗೆ. | ಎಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ನಿರಂತರವಾಗಿ ಫಲಾನುಭವಿಗಳಿಗೆ ರೋಗ ಪತ್ತೆ ಸೇವೆಗಳನ್ನು ಒದಗಿಸಲು ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ ಲ್ಯಾಬ್ ಉಪಕರಣಗಳಿಗೆ ರಾಸಾಯನಿಕಗಳು ಹಾಗೂ ಕಂಪ್ಯೂಟರ್ ರೆಡಿಯಾಗ್ರಫಿ ಸಿಸ್ಟಮ್‌ಗಳಿಗೆ Dry Laser X ray Films ಮತ್ತು ಪರಿಕರಗಳನ್ನು ಒದಗಿಸಲು ಸಚಿವ ಸಂಪುಟ ನಿರ್ಧರಿಸಿದೆ. | • ಒಟ್ಟು ಯೋಜನಾ ವೆಚ್ಚ ರೂ.50.15 ಕೋಟಿ.<br>• ಉಪಕೇಂದ್ರದ ಮಟ್ಟದಲ್ಲಿ 14 ಪ್ರಯೋಗಶಾಲಾ ಪರೀಕ್ಷೆಗಳು.<br>• ಪ್ರಾಥಮಿಕ ಮತ್ತು ನಗರ ಆರೋಗ್ಯ ಕೇಂದ್ರಗಳಲ್ಲಿ 63 ಪ್ರಯೋಗಶಾಲಾ ಪರೀಕ್ಷೆಗಳನ್ನು.<br>• ತಾಲ್ಲೂಕು ಆಸ್ಪತ್ರೆ ಮಟ್ಟದಲ್ಲಿ 111 ಪ್ರಯೋಗಶಾಲಾ ಪರೀಕ್ಷೆಗಳು.<br>• ಜಿಲ್ಲಾ ಆಸ್ಪತ್ರೆ ಮಟ್ಟದಲ್ಲಿ 134 ಪ್ರಯೋಗಶಾಲಾ ಪರೀಕ್ಷೆಗಳನ್ನು ಒದಗಿಸಬೇಕಾಗಿದೆ. | ರಾಷ್ಟ್ರೀಯ ಉಚಿತ ರೋಗ ಪತ್ತೆ ಮತ್ತು ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರ ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಹಾಗೂ ರಾಜ್ಯ ಮಟ್ಟದ ಆಸ್ಪತ್ರೆಯಲ್ಲಿ ಇರುವ ಲ್ಯಾಬ್ ಉಪಕರಗಳು ಮತ್ತು ರೇಡಿಯಾಗ್ರಫಿ ಸಿಸ್ಟಂಗಳು (ಅನುಬಂಧ–1) ಇವುಗಳಿಗೆ ಅಗತ್ಯವಿರುವ ರಾಸಾಯನಿಕ ಹಾಗೂ Dry Laser X ray Films ಮತ್ತು ಪರಿಕರಗಳನ್ನು (ಅನುಬಂಧ–2) 15ನೇ ಹಣಕಾಸು ಆಯೋಗ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನ ಇವುಗಳಡಿಯಲ್ಲಿನ ಒಟ್ಟು ರೂ.50.15 ಕೋಟಿ ಅನುದಾನದಲ್ಲಿ ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಖರೀದಿಸಿ ಸಂಗ್ರಹಿಸಿ ಸರಬರಾಜು ಮಾಡಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 3 | <u>**ಒಳಾಡಳಿತ ಇಲಾಖೆ:**</u> ಬೆಂಗಳೂರು ನಗರ ಸಂಚಾರ ವಿಭಾಗ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ 136 ಸಂಚಾರಿ ಸಿಗ್ನಲ್ ವ್ಯವಸ್ಥೆಗಳನ್ನು ಉನ್ನತೀಕರಿಸಲು ಮತ್ತು ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಕ್ಕೆ ಸಿಂಕ್ರೊನೈಸೇಶನ್ ಮಾಡಲು ಹಾಗೂ 29 ಸ್ಥಳಗಳಲ್ಲಿ ಹೊಸ ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಗಳನ್ನು ಅಳವಡಿಸಿ ಸಿಂಕ್ರೊನೈಸೇಶನ್ ಮಾಡಲು ಹಾಗೂ 165 ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣ ಘಟಕಗಳನ್ನು 05 ವರ್ಷಗಳ ಅವಧಿಗೆ ನಿರ್ವಹಿಸುವ | ಸಂಚಾರ ಮತ್ತು ರಸ್ತೆ ಸುರಕ್ಷತೆ ನಿಧಿಯಿಂದ ಬೆಂಗಳೂರು ನಗರದಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸುವ ಮತ್ತು ಮೇಲ್ದರ್ಜೆಗೇರಿಸುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.<br><br>ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಗಳನ್ನು (Adoptive Traffic Control System) ಅಳವಡಿಸಿ ಅಂದರೆ, ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವುದಕ್ಕಾಗಿ ಹಸಿರು ದೀಪದ ಬದಲಾವಣೆಯನ್ನು ಸ್ವಯಂಚಾಲಿತವಾಗಿ ಕ್ರೀಯಾತ್ಮಕವಾಗಿ ತನ್ನಿಂದ ತಾನೆ ಬದಲಾಯಿಸಿ ಜನಸಂದಣಿ ದಟ್ಟಣೆಯ ಅನುಗುಣವಾಗಿ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಮತ್ತು ಅಕ್ಕಪಕ್ಕದ | • ಒಟ್ಟು ಯೋಜನಾ ವೆಚ್ಚ ರೂ.58.54 ಕೋಟಿ.<br>• ಹಾಲಿ 184 ಸಂಚಾರಿ ಸಿಗ್ನಲ್‌ಗಳನ್ನು ಮೇಲ್ದರ್ಜೆಗೇರಿಸಲಾಗುವುದು.<br>• 32 ಹೊಸ ಸ್ಥಳಗಳಲ್ಲಿ ಅಡಾಪ್ಟೀವ್ ಸಂಚಾರ ವ್ಯವಸ್ಥೆ ನಿಯಂತ್ರಣ ಅಳವಡಿಸಲಾಗುವುದು.<br>• ಒಟ್ಟು 216 ಸಂಚಾರಿ ಸಿಗ್ನಲ್‌ಗಳು 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. | ಬೆಂಗಳೂರು ನಗರ ಸಂಚಾರ ವಿಭಾಗ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ 136 ಸಂಚಾರಿ ಸಿಗ್ನಲ್ ವ್ಯವಸ್ಥೆಗಳನ್ನು ಉನ್ನತೀಕರಿಸಲು ಮತ್ತು ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಕ್ಕೆ ಸಿಂಕ್ರೊನೈಸೇಶನ್ ಮಾಡಲು ಹಾಗೂ 29 ಸ್ಥಳಗಳಲ್ಲಿ ಹೊಸ ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಗಳನ್ನು ಅಳವಡಿಸಿ ಸಿಂಕ್ರೊನೈಸೇಶನ್ ಮಾಡಲು ಹಾಗೂ 165 ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣ ಘಟಕಗಳನ್ನು 05 ವರ್ಷಗಲ ಅವಧಿಗೆ ನಿರ್ವಹಿಸುವ ಕಾಮಗಾರಿಗಳನ್ನು ಒಟ್ಟು ರೂ.58.54 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ಅನುಮೋದಿಸಿದೆ. |

| | | | | |
|---|---|---|---|---|
| | ಕಾಮಗಾರಿಗಳನ್ನು ಒಟ್ಟು ರೂ.58.54 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಇಂಟರ್ ಸೆಕ್ಷನ್‌ಗಳಲ್ಲಿ ವಾಹನಗಳ ಚಾಲನೆ ಸುಗಮವಾಗಿ ಮತ್ತು ಸತತವಾಗಿ ಇರುವಂತೆ ತನ್ಮೂಲಕ ದಟ್ಟಣೆಯನ್ನು ಕಡಿಮೆಗೊಳಿಸಲು ಮಾಡಲಾಗುವ ವ್ಯವಸ್ಥೆಯಾಗಿದೆ. | | |

| | | | | |
|---|---|---|---|---|
| 4 | <u>**ಉನ್ನತ ಶಿಕ್ಷಣ ಇಲಾಖೆ:**</u> ಕಾಲೇಜು ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯಕವಿರುವ ಒಟ್ಟು 449 ಸಿಬ್ಬಂದಿಗಳ ಸೇವೆಯನ್ನು ರೂ.11.30 ಕೋಟಿಗಳ ಮೊತ್ತದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಕಾಲೇಜು ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯಕವಿರುವ ಒಟ್ಟು 449 ಸಿಬ್ಬಂದಿಗಳ ಸೇವೆಯನ್ನು ರೂ.11.30 ಕೋಟಿಗಳ ಮೊತ್ತದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಸಚಿವ ಸಂಪುಟ ಒಪ್ಪಿದೆ.<br><br>ಇಲಾಖೆಯ ಕಛೇರಿಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಗ್ರೂಪ್–ಡಿ ನೌಕರರ ತೀವ್ರ ಅಭಾವವನ್ನು ಎದುರಿಸುತ್ತಿದ್ದು, ಕೋವಿಡ್ ಸಾಂಕ್ರಾಮಿಕದ ಮೂರು ಅಲೆಗಳ ಸಂದರ್ಭದ ನಂತರ ಹಿಂದೆಂದಿಗಿಂತಲೂ ಪ್ರಮುಖವಾದ ಸ್ವಚ್ಛತಾ ಕಾರ್ಯವೂ ಸೇರಿದಂತೆ ಅನೇಕ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. | • ಕಾಲೇಜು ಶಿಕ್ಷಣ ವ್ಯಾಪ್ತಿಯಲ್ಲಿರುವ 449 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು.<br>• ಕೇಂದ್ರ ಕಛೇರಿ<br>• 06 ಪ್ರಾದೇಶಿಕ ಕಛೇರಿಗಳು.<br>• 1309 ಅಟೆಂಡರ್ ಹುದ್ದೆಗಳು ಮತ್ತು 1534 ಪರಿಚಾರಕ ಹುದ್ದೆಗಳು ಮಂಜೂರಾಗಿವೆ.<br>• ಒಟ್ಟು 2843 ಗ್ರೂಪ್ 'ಡಿ' ಹುದ್ದೆಗಳ ಪೈಕಿ 418 ಹುದ್ದೆಗಳಲ್ಲಿ ಸಿಬ್ಬಂದಿ ಕಾರ್ಯನಿ 2425 ಹುದ್ದೆಗಳು ಖಾಲಿ ಇವೆ. | ಕಾಲೇಜು ಶಿಕ್ಷಣ ಇಲಾಖೆ ಹಾಗೂ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯಕವಿರುವ 347 ಗ್ರೂಪ್–ಡಿ ನೌಕರರು ಮತ್ತು 102 ಡಾಟಾ ಎಂಟ್ರಿ ಆಪರೇಟರ್‌ಗಳು ಸೇರಿದಂತೆ, ಒಟ್ಟು 449 ಹುದ್ದೆಗಳ ಸೇವೆಯನ್ನು ಅಂದಾಜು ರೂ.11.30 ಕೋಟಿಗಳ ಮೊತ್ತದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ. |

| | | | | |
|---|---|---|---|---|
| | | ವಿದ್ಯಾರ್ಥಿಗಳ, ಅಧ್ಯಾಪಕರ ವೃಂದದ ಮತ್ತು ಸಮುದಾಯದ ಆರೋಗ್ಯ ಹಾಗೂ ವಿದ್ಯಾರ್ಥಿಗಳ ಶಿಕ್ಷಣದ ಹಿತದೃಷ್ಟಿಯಿಂದ ಗ್ರೂಪ್-ಡಿ ನೌಕರರ ಸೇವೆಯನ್ನು ಒದಗಿಸಿಕೊಳ್ಳುವ ಅಗತ್ಯವಿದೆ. | | |

| | | | | |
|---|---|---|---|---|
| 6 | **<u>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ:</u>** ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2023ಕ್ಕೆ ಅನುಮೋದನೆ ನೀಡುವ ಬಗ್ಗೆ. | ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಮತ್ತು ಪ್ರಾಂಶುಪಾಲರ ವೃಂದಕ್ಕೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡಲು ಸಚಿವ ಸಂಪುಟ ಒಪ್ಪಿದೆ. | • ಜಂಟಿ ನಿರ್ದೇಶಕರ 5 ಹುದ್ದೆಗಳನ್ನು ಮರುನಾಮಿಕರಿಸಲು.<br>• ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೆ.ಪಿ.ಎಸ್.ಸಿ ಅಥವಾ ಕೆ.ಇ.ಎ ಎಂಬುದರ ಬದಲಾಗಿ ಕೆ.ಪಿ.ಎಸ್.ಸಿ ಅಥವಾ ಸರ್ಕಾರದಿಂದ ವಹಿಸಬಹುದಾದ ಬೇರೆ ಯಾವುದಾದರು ಸಂಸ್ಥೆ ಮೂಲಕ ನೇಮಕ ಮಾಡಲು.<br>• ಹೀಗೆ ಹಲವಾರು ತಿದ್ದುಪಡಿಗಳನ್ನು ಪ್ರಸ್ತಾಪಿಸಿದೆ. | ಪ್ರಸ್ತಾಪಿತ ಕರ್ನಾಟಕ ಸಾಮಾನ್ಯ ಸೇವೆಗಳು (ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2023 (The Karnataka General Services [Department of School Education (Pre-University] (Recruitment) (Amendment) Rules, 2023 ಈ ಕರಡು ತಿದ್ದುಪಡಿ ನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, 15 ದಿನಗಳೊಳಗಾಗಿ ಬಾಧಿತ ವ್ಯಕ್ತಿಗಳಿಂದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಲು.<br>**ಹಾಗೂ**<br>ಯಾವುದೇ ಆಕ್ಷೇಪಣೆಗಳು /ಸಲಹೆಗಳು ಸ್ವೀಕೃತವಾಗದಿದ್ದಲ್ಲಿ ಅಥವಾ ಸ್ವೀಕೃತಗೊಂಡ ಆಕ್ಷೇಪಣೆ/ಸಲಹೆಗಳು ಸಣ್ಣ ಪ್ರಮಾಣದ್ದಾಗಿದ್ದು (Minor in nature) ಅವುಗಳನ್ನು |

| | | | | |
|---|---|---|---|---|
| | | | | ಇಲಾಖೆಯೇ ಪರಿಗಣಿಸಿ, ಕರಡು ನಿಯಮಗಳಲ್ಲಿ ಯಾವುದೇ ಪ್ರಮುಖ ತಿದ್ದುಪಡಿಗಳ ಅವಶ್ಯವಿಲ್ಲದಿದ್ದಲ್ಲಿ ಅಂತಿಮ ನಿಯಮಗಳನ್ನು ಕೆ.ಇ.ಎ ಇಂದ ಮುಂದುವರೆಸಲು ಸಚಿವ ಸಂಪುಟ ನಿರ್ಣಯಿಸಲಾಯಿತು. |

| | | | | |
|---|---|---|---|---|
| 7 | **<u>ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ:</u>**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಉದ್ದೇಶಗಳು ಹಾಗೂ ಪ್ರಕ್ರಿಯೆಗಳನ್ನು ಪರಿಷ್ಕರಿಸುವ ಬಗ್ಗೆ. | ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಉದ್ದೇಶಗಳು ಹಾಗೂ ಪ್ರಕ್ರಿಯೆಗಳನ್ನು ಪರಿಷ್ಕರಿಸಲು ಸಚಿವ ಸಂಪುಟ ಒಪ್ಪಿದೆ. | • ಮಾರ್ಗಸೂಚಿಗಳನ್ನು, ತರಬೇತಿ ಪಾಲುದಾರರ, ತರಬೇತಿ ಕೇಂದ್ರಗಳ ಕಾರ್ಯಕ್ಷಮತೆಯ ವಿಶ್ಲೇಷಣೆ ಪದ್ಧತಿ, ಮೌಲ್ಯಮಾಪನ ಸಂಸ್ಥೆಗಳನ್ನು ಅನುಮೋದಿಸುವ ಅಧಿಕಾರ ಹಾಗೂ ಕೌಶಲ್ಯ ಕಾರ್ಯಕ್ರಮಗಳಿಗೆ ನಿಗದಿಪಡಿಸಲಾಗಿತ್ತು.<br>• ಈಗ ಕೇವಲ ಶಿಫಾರಸ್ಸು ಮಾಡುವ ಅಧಿಕಾರವನ್ನು ನೀಡಲು ಸಚಿವ ಸಂಪುಟಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. | ಕರ್ನಾಟಕ ಸರ್ಕಾರ ವ್ಯವಹಾರ ನಿರ್ವಹಣೆ ನಿಯಮಗಳು 1977ರ ನಿಯಮ 33 ರಡಿ, ಪರಿಷ್ಕೃತ ಉದ್ದೇಶ ಹಾಗೂ ಪ್ರಕಾರ್ಯಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 8 | **ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ:** ರಾಜ್ಯದ 08 ಜಿಲ್ಲೆಗಳಲ್ಲಿ ವಾಸಿಸುತ್ತಿರುವ 11 ಬುಡಕಟ್ಟು ಪಂಗಡಗಳಾದ ಕೊರಗ, ಜೆನುಕುರುಬ, ಸೋಲಿಗ, ಎರವ, ಕಾಡುಕುರುಬ, ಮಲೆಕುಡಿಯ, ಸಿದ್ಧಿ, ಹಸಲರು, ಗೌಡಲು, ಗೊಂಡ ಮತ್ತು ಬೆಟ್ಟಕುರುಬ ಜನಾಂಗದ ಕುಟುಂಬಗಳಿಗೆ ವರ್ಷದ 12 ತಿಂಗಳು ಪೌಷ್ಠಿಕ ಆಹಾರವನ್ನು ಉಚಿತವಾಗಿ ರೂ.120.00 ಕೋಟಿಗಳ ಅಂದಾಜು ಮೊತ್ತದಲ್ಲಿ ಸರಬರಾಜು ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಬಗ್ಗೆ. | ರಾಜ್ಯದ 08 ಜಿಲ್ಲೆಗಳಲ್ಲಿ ವಾಸಿಸುತ್ತಿರುವ 11 ಬುಡಕಟ್ಟು ಪಂಗಡಗಳಾದ ಕೊರಗ, ಜೇನುಕುರುಬ, ಸೋಲಿಗ, ಎರವ, ಕಾಡುಕುರುಬ, ಮಲೆಕುಡಿಯು, ಸಿದ್ಧಿ, ಹಸಲರು, ಗೌಡಲು, ಗೊಂಡ ಮತ್ತು ಬೆಟ್ಟಕುರುಬ ಜನಾಂಗದ ಕುಟುಂಬಗಳಿಗೆ ವರ್ಷದ 12 ತಿಂಗಳು ಪೌಷ್ಠಿಕ ಆಹಾರವನ್ನು ಉಚಿತವಾಗಿ ರೂ.120.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಸರಬರಾಜು ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಲು ಸಚಿವ ಸಂಪುಟ ಒಪ್ಪಿದೆ. | • ಒಟ್ಟು ಯೋಜನಾ ವೆಚ್ಚ ರೂ.120.00 ಕೋಟಿ.<br>• 8 ಜಿಲ್ಲೆಗಳು<br>• 11 ಬುಡಕಟ್ಟು ಪಂಗಡಗಳು<br>• 47859 ಕುಟುಂಬಗಳು<br>• ಪ್ರಸ್ತುತ 6 ತಿಂಗಳಿಗೆ ನೀಡಲಾಗುತ್ತಿದ್ದ ಪೌಷ್ಠಿಕ ಆಹಾರವನ್ನು 12 ತಿಂಗಳುಗಳಿಗೆ ವಿಸ್ತರಿಸಲಾಗುವುದು. | ರಾಜ್ಯದ 08 ಜಿಲ್ಲೆಗಳಲ್ಲಿ ವಾಸಿಸುತ್ತಿರುವ 11 ಬುಡಕಟ್ಟು ಪಂಗಡಗಳಾದ ಕೊರಗ, ಜೇನುಕುರುಬ, ಸೋಲಿಗ, ಎರವ, ಕಾಡುಕುರುಬ, ಮಲೆಕುಡಿಯು, ಸಿದ್ಧಿ, ಹಸಲರು, ಗೌಡಲು, ಗೊಂಡ ಮತ್ತು ಬೆಟ್ಟಕುರುಬ ಜನಾಂಗದ ಒಟ್ಟಾರೆ 47859 ಕುಟುಂಬಗಳಿಗೆ 12 ತಿಂಗಳುಗಳಿಗೆ ಪೌಷ್ಠಿಕ ಆಹಾರವನ್ನು ಉಚಿತವಾಗಿ ಸರಬರಾಜು ಮಾಡಲು ಅಗತ್ಯವಿರುವ ಹೆಚ್ಚುವರಿ ಅನುದಾನ ರೂ.50.00 ಕೋಟಿಗಳ ಅನುದಾನದೊಂದಿಗೆ ಒಟ್ಟಾರೆ ರೂ.120.00 ಕೋಟಿ ಅನುದಾನದಲ್ಲಿ ಪೌಷ್ಠಿಕ ಆಹಾರ ಪದಾರ್ಥಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999–2000ರನ್ವಯ ರಾಜ್ಯಮಟ್ಟದಲ್ಲಿ ಟೆಂಡರ್ ಆಹ್ವಾನಿಸಿ ಖರೀದಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 9 | **ಸಾರಿಗೆ ಇಲಾಖೆ:**<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 300 ಎಲೆಕ್ಟ್ರೀಕ್ ಬಸ್‌ಗಳನ್ನು (ಎ.ಸಿ–75, ನಾನ್ ಎ.ಸಿ–225) ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ 450 ನಾನ್ ಎ.ಸಿ ಎಲೆಕ್ಟ್ರೀಕ್ ಬಸ್‌ಗಳನ್ನು ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 100 ಬಿ.ಎಲ್.ಟಿ.ಎಸ್ 150 ನಗರ ಸಾರಿಗೆ (ಹುಬ್ಬಳ್ಳಿ, ಧಾರವಾಡ ಹಾಗೂ ಬೆಳಗಾವಿ ನಗರಗಳಿಗೆ) ಮತ್ತು 200 ಗ್ರಾಮಾಂತರ ಸಾರಿಗೆ ಸೇರಿದಂತೆ, ಒಟ್ಟು 450 ಸಂಖ್ಯೆ 12 ಮೀ. ನಾನ್–ಎ.ಸಿ ಎಲೆಕ್ಟ್ರೀಕ್ ಬಸ್ಸುಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಿ, ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆಗೊಳಿಸಲು ಆಡಳಿತಾತ್ಮಕ ಅನುಮೋದನೆ ಕೋರಲಾಗಿತ್ತು. | • 12 ಮೀ. ಉದ್ದದ 300 ಎಲೆಕ್ಟ್ರೀಕ್ ಬಸ್ಸುಗಳು.<br>• ಎ.ಸಿ–75<br>• ನಾನ್ ಎ–ಸಿ–225 | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 300 ಸಂಖ್ಯೆ (ಎ.ಸಿ–75, ನಾನ್–ಎ.ಸಿ–225) 12 ಮೀ. ಎಲೆಕ್ಟ್ರೀಕ್ ಬಸ್ಸುಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಿ, ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು.<br><br>ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 100 ಬಿ.ಎಲ್.ಟಿ.ಎಸ್ 150 ನಗರ ಸಾರಿಗೆ (ಹುಬ್ಬಳ್ಳಿ, ಧಾರವಾಡ ಹಾಗೂ ಬೆಳಗಾವಿ ನಗರಗಳಿಗೆ) ಮತ್ತು 200 ಗ್ರಾಮಾಂತರ ಸಾರಿಗೆ ಸೇರಿದಂತೆ, ಒಟ್ಟು 450 ಸಂಖ್ಯೆ 12 ಮೀ. ನಾನ್–ಎ.ಸಿ ಎಲೆಕ್ಟ್ರೀಕ್ ಬಸ್ಸುಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಿ, ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 10 | **<u>ಸಾರಿಗೆ ಇಲಾಖೆ:</u>** ನಗರ ಭೂ ಸಾರಿಗೆ ನಿರ್ದೇಶನಾಲಯವು ರಾಜ್ಯ ನಗರ ಸಾರಿಗೆ ನಿಧಿಯಡಿ ಮಂಜೂರು ಮಾಡಿರುವ ಅನುದಾನದಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಅನುಮೋದಿತ 20 ಎಲೆಕ್ಟ್ರೀಕ್ ಮಿನಿ ಬಸ್ಸುಗಳನ್ನು ಖರೀದಿಸುವ ಬದಲಾಗಿ 20 ಸಂಖ್ಯೆಯ ಹವಾನಿಯಂತ್ರಣ ರಹಿತ ಎಲೆಕ್ಟ್ರೀಕ್ ಬಸ್ಸುಗಳನ್ನು ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಪರಿಸರ ಸ್ನೇಹಿ ಎಲೆಕ್ಟ್ರೀಕ್ ಬಸ್ಸುಗಳನ್ನು ಪರಿಚಯಿಸಲು ಮುಂದಾಗುತ್ತಿದೆ. ಎಲೆಕ್ಟ್ರೀಕ್ ಬಸ್ಸುಗಳ ಆಚರಣೆಯಿಂದ Green House Gases (GHG) ಕಡಿಮೆಗೊಳಿಸಲು ಹೊಸ ತಂತ್ರಜ್ಞಾನ ಅಳವಡಿಕೆ, ಶೇ.100 ರಷ್ಟು ಹೊಗೆ ರಹಿತ ಹಾಗೂ ಕಡಿಮೆ ಶಬ್ದ, ವಿದ್ಯುತ್‌ನ್ನು ನವೀಕರಿಸಬಹುದಾದ ಸಂಪನ್ಮೂಲಗಳಿಂದ ಉತ್ಪಾದಿಸ ಬಹುದಾಗಿದ್ದು, ವಿದ್ಯುತ್ ವೆಚ್ಚವು ಇಂಧನ ವೆಚ್ಚಕ್ಕಿಂತ ಕಡಿಮೆ ಇರುವುದರಿಂದ 20 ಮಿನಿ ಬಸ್ಸುಗಳ ಬದಲಾಗಿ 09 ಮೀ. ಉದ್ದದ ಎಲೆಕ್ಟ್ರೀಕ್ ಬಸ್ಸುಗಳಣ್ನು ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡಲು ಪ್ರಸ್ತಾಪಿಸಲಾಗಿದೆ. | | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಅನುಮೋದಿತ 20 ಎಲೆಕ್ಟ್ರೀಕ್ ಮಿನಿ (ಚಿಕ್ಕ) ಬಸ್ಸುಗಳನ್ನು ಖರೀದಿಸುವ ಬದಲಾಗಿ 20 ಸಂಖ್ಯೆಯ ಹವಾನಿಯಂತ್ರಣ ರಹಿತ 9 ಮೀ. ಎಲೆಕ್ಟ್ರೀಕ್ ಬಸ್ಸುಗಳನ್ನು ಆರ್ಥಿಕ ಪರಿಣಾಮದಲ್ಲಿ ತಿಳಿಸಿರುವಂತೆ ಮೊತ್ತವನ್ನು ಭರಿಸಿ, ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯ ಜೆ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ. |

| | | | | |
|---|---|---|---|---|
| 11 | **<u>ನಗರಾಭಿವೃದ್ಧಿ ಇಲಾಖೆ:</u>** ಮೈಸೂರು ನಗರದ ಡಾ॥ ಬಿ.ಆರ್. ಅಂಬೇಡ್ಕರ್ ಭವನದ ಬಾಕಿ ಇರುವ ಕಾಮಗಾರಿಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಮದ ಅಭಿವೃದ್ಧಿ ನಿಧಿ–1 ರಡಿಯಲ್ಲಿ ರೂ.19.10 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ. | ಮೂಲ ನಕ್ಷೆಯಂತೆ ಅಡಿಟೋರಿಯಂನ್ನು ತೆರೆದ ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಆನಂತರ ಕ್ಲೋಸಡ್ ಮಾದರಿಯ ಅಡಿಟೋರಿಯಂ ನಿರ್ಮಿಸಲು ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಹಲವು ಅಂಶಗಳು ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಬೇಕಾಗಿರುತ್ತದೆ. ಆದ್ದುದರಿಂದ ಅಂಬೇಡ್ಕರ್ ಭವನದ ಮೊದಲ ಹಂತದಲ್ಲಿ ಮಂಜೂರಾದ ಅಂದಾಜಿನಲ್ಲಿ ವಾಲ್ ಪ್ಯಾನಲಿಂಗ್, ಪಾಲ್ ಸಿಲೀಂಗ್, ಅಂತರಿಕ ರಸ್ತೆಗಳು, ಯು.ಜಿ.ಡಿ ಮಳೆ ನೀರು ಕುಯಿಲು ವ್ಯವಸ್ಥೆ, ನೆಲ ಹಾಸು, ವೇದಿಕೆ, ಒಳಾಂಗಣ ವಿದ್ಯುದೀಕರಣ, ಹವನಿಯಂತ್ರಿತ ವ್ಯವಸ್ಥೆ, ಧ್ವನಿವರ್ಧಕ ವ್ಯವಸ್ಥೆ, ಆಸನಗಳ ವ್ಯವಸ್ಥೆ, ಲಿಫ್ಟ್ ಅಳವಡಿಸುವ ಅಂಶಗಳು ಸೇರ್ಪಡೆಗೊಂಡಿಲ್ಲದ ಕಾರಣ | • ರೂ.14.66 ಕೋಟಿ ಮೂಲವೆಚ್ಚ.<br>• ರೂ.5.94 ಕೋಟಿ ಹೆಚ್ಚುವರಿ ವೆಚ್ಚ. | ಮೈಸೂರು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಬಾಕಿ ಕಾಮಗಾರಿಯನ್ನು ಪ್ರಾಧಿಕಾರದ ಅಭಿವೃದ್ಧಿ ನಿಧಿ–2 ರಲ್ಲಿ ಭರಿಸಬೇಕಿದ್ದು, ಸದರಿ ಕಾಮಗಾರಿಗೆ ಅವಶ್ಯವಿರುವ ರೂ.19.10 ಕೋಟಿ ಅನುದಾನವನ್ನು ಅಭಿವೃದ್ಧಿ ನಿಧಿ–1 ರಲ್ಲಿ ಭರಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 04 ಟಿಟಿಪಿ 2019 ದಿನಾಂಕ: 01.03.2019 ರನ್ವಯ ಅವಕಾಶವಿರುವುದಿಲ್ಲ ವಾದ್ದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸುವ ಬಗ್ಗೆ.<br>**ಹಾಗೂ**<br>ಮೈಸೂರು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಬಾಕಿ ಕಾಮಗಾರಿಗೆ ಅವಶ್ಯವಿರುವ ರೂ.19.10 |

| | | | | |
|---|---|---|---|---|
| | | ಯೋಜನಾ ಮೊತ್ತದಲ್ಲಿ ವ್ಯತ್ಯಾಸವಾಗಿರುತ್ತದೆ.<br>ಡಾ. ಬಿ.ಆರ್. ಅಂಬೇಡ್ಕರ್ ಭವನದ ಉಳಿಕೆ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ಏಕ ರೂಪ ದರಪಟ್ಟಿ ದರಗಳನ್ನು ಬಳಸಿ ರೂ.22.30 ಕೋಟಿಗಳಿಗೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸಿ ತಯಾರಿಸಿದ್ದು, ಸದರಿ ಕಾಮಗಾರಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ. | | ಲಕ್ಷಗಳ ಅನುದಾನವನ್ನು ಪ್ರಾಧಿಕಾರದ ಲೆಕ್ಕ ಶೀರ್ಷಿಕೆ ಅಭಿವೃದ್ಧಿ ನಿಧಿ–1 ರಲ್ಲಿ ಭರಿಸಲು ದಿನಾಂಕ: 01.03.2019ರ ಸುತ್ತೋಲೆಗೆ ವಿನಾಯಿತಿ ನೀಡಿ ಮತ್ತು ಬಾಕಿ ಕಾಮಗಾರಿಯ ಅಂದಾಜು ಮೊತ್ತ ರೂ.19.10 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿಯನ್ನು ಪ್ರಾಧಿಕಾರದ ವತಿಯಿಂದ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲು.<br>ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 12 | **<u>ಜಲಸಂಪನ್ಮೂಲ ಇಲಾಖೆ:</u>** ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿ ಮತ್ತು ಆಡಳಿತ ನಿಯಂತ್ರಣದಲ್ಲಿರುವ ಕೆಲವು ಯೋಜನೆಗಳ / ಕಾಮಗಾರಿಗಳ ಆಸ್ತಿ ಮತ್ತು ಹೊಣೆಗಾರಿಕೆಯನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸುವ ಬಗ್ಗೆ. | ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿ ಮತ್ತು ಆಡಳಿತ ನಿಯಂತ್ರಣದಲ್ಲಿರುವ ಕೆಲವು ಯೋಜನೆಗಳ / ಕಾಮಗಾರಿಗಳ ಆಸ್ತಿ ಮತ್ತು ಹೊಣೆಗಾರಿಕೆಯನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸಲು ಸಚಿವ ಸಂಪುಟ ಒಪ್ಪಿದೆ. | | ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ವಾಣಿ ವಿಲಾಸ ಸಾಗರ ಯೋಜನೆ ಹಾಗೂ ಗಾಯತ್ರಿ ಜಲಾಶಯ ಯೋಜನಾ ಕಾಮಗಾರಿಗಳ Demerger Scheme ರಲ್ಲಿ ಅನುಮೋದಿತ ರೂ.36.98 ಮೊತ್ತದ ಆಸ್ತಿ ಮತ್ತು ಹೊಣೆಗಾರಿಕೆಯನ್ನು ಕರ್ನಾಟಕ ನೀರಾವರಿ ನಿಗಮದಿಂದ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 13 | **ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ:** ಶ್ರೀ ಜಿ. ಶ್ರೀಧರ್, ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಇವರನ್ನು ನಿವೃತ್ತಿ ನಂತರ ದಿನಾಂಕ: 01.01.2024 ರಿಂದ ಅನ್ವಯಿಸುವಂತೆ ಅದೇ ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಲ ಅವಧಿಗೆ ಮರು ನೇಮಕಾತಿ ಮಾಡುವ ಬಗ್ಗೆ. | ಶ್ರೀ ಜಿ. ಶ್ರೀಧರ್, ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರನ್ನು ಇಲಾಖೆಯಲ್ಲಿ 32 ವರ್ಷದ ಅನುಭವದ ಹಿನ್ನೆಲೆಯಲ್ಲಿ ಅವರ ಸೇವಾನುಭವ ಗಮನದಲ್ಲಿರಿಸಿಕೊಂಡು ಅವರ ಸೇವೆಯನ್ನು 2 ವರ್ಷಗಳ ಅವಧಿಗೆ ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಈ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಮರು ನೇಮಕಾತಿ ಮಾಡಲು ಪ್ರಸ್ತಾಪಿಸಲಾಗಿದೆ. | | ಶ್ರೀ ಜಿ. ಶ್ರೀಧರ್, ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ಇವರು ದಿನಾಂಕ: 31.12.2023 ರಲ್ಲಿ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿದ್ದು, ಇವರನ್ನು ದಿನಾಂಕ: 01.01.2024 ರಿಂದ ಅನ್ವಯಿಸುವಂತೆ ಎರಡು ವರ್ಷಗಳ ಅವಧಿಗೆ ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಈ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 15(1) (ಎ) ರನ್ವಯ ಗುತ್ತಿಗೆ ಆಧಾರದ ಮೇಲೆ ಮರು ನೇಮಕಾತಿ ಮಾಡಿಕೊಳ್ಳಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 14 | **ವಸತಿ ಇಲಾಖೆ:** ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) – "ಸರ್ವರಿಗು ಸೂರು" ಅಭಿಯಾನದಡಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ 1,80,253 ಮನೆಗಳನ್ನು ಪೂರ್ಣಗೊಳಿಸಲು ಫಲಾನುಭವಿಗಳ ವಂತಿಕೆ ಹಾಗೂ ಮೂಲಭೂತ ಸೌಕರ್ಯಗಳಿಗಾಗಿ ಅಗತ್ಯವಿರುವ ಒಟ್ಟಾರೆ ರೂ.6170.00 ಕೋಟಿಗಳನ್ನು ಸರ್ಕಾರದಿಂದ ಒದಗಿಸುವ ಬಗ್ಗೆ. | ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಕೊಳಗೇರಿಗಳಲ್ಲಿನ ಶೆಡ್ಡು–ಗುಡಿಸಲುಗಳನ್ನು ತೆರವುಗೊಳಿಸಿ, ಮನೆಗಳ ಕಾಮಗಾರಿಗಳನ್ನು ಪ್ರಾರಂಭಿಸಿದ್ದು, ಕೊಳಗೇರಿ ವಾಸಿಗಳಿಗೆ ವಾಸಿಸಲು ಮನೆಗಳಿಲ್ಲದೆ ತೊಂದರೆಯಾಗಿರುತ್ತದೆ. ಅವರುಗಳ ದೈನಂದಿನ ಆಹಾರ, ಮಕ್ಕಳಿಗೆ ಶಾಲೆ ಮುಂತಾದ ಸೌಲಭ್ಯಗಳು ಇಲ್ಲದಂತಾಗಿ ಬೀದಿಪಾಲಾಗಿದ್ದು, ಫಲಾನುಭವಿಗಳು ದಿನನಿತ್ಯ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವುದರಿಂದ ಇಂತಹ ಪರಿಸ್ಥಿತಿಯಲ್ಲಿ ಫಲಾನುಭವಿಗಳು ವಂತಿಕೆ ಪಾವತಿಸಲು ಕಷ್ಟಕರವಾಗಿರುವ ಹಿನ್ನೆಲೆಯಲ್ಲಿ ಈ | | ಎ.ಹೆಚ್.ಪಿ ಘಟಕದಡಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ 1,80,253 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸುತ್ತಿರುವ ಮನೆಗಳ ಪೈಕಿ ಮುಕ್ತಾಯ ಹಂತದಲ್ಲಿರುವ 48,796 ಮನೆಗಳ ಪೈಕಿ ಪ್ರತಿ ಫಲಾನುಭವಿಗಳಿಂದ ಗರಿಷ್ಠ ರೂ.1.00 ಲಕ್ಷಗಳನ್ನು ಮಾತ್ರ ಸಂಗ್ರಹಿಸಿ ಉಳಿದ ಒಟ್ಟು ಫಲಾನುಭವಿ ವಂತಿಗೆ ಮೊತ್ತ ರೂ.5403.00 ಕೋಟಿಗಳನ್ನು ಸರ್ಕಾರದಿಂದ ಭರಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.767.00 ಕೋಟಿಗಳು ಸೇರಿ ಅವಶ್ಯಯವಿರುವ ಒಟ್ಟಾರೆ ರೂ.6170.00 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಭರಿಸಲು. |

| | | | | |
|---|---|---|---|---|
| | | ಯೋಜನೆಯಡಿ ಫಲಾನುಭವಿಗಳ ವಂತಿಕೆ ಪ್ರಮಾಣ ಸರಾಸರಿ ಮನೆಗಳ ಘಟಕ ವೆಚ್ಚದ ಶೇ.45 ರಿಂದ 55 ರಷ್ಟಿದ್ದು, ಫಲಾನುಭವಿಗಳು ಪೂರ್ಣ ಪ್ರಮಾಣದಲ್ಲಿ ಭರಿಸಲಾಗದೇ ಇರುವ ಬಗ್ಗೆ ಮನಗಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ ಹೊರತುಪಡಿಸಿ ಫಲಾನುಭವಿಗಳಿಂದ ಗರಿಷ್ಠ ರೂ.1.00 ಲಕ್ಷಗಳನ್ನು ಮಾತ್ರ ಸಂಗ್ರಹಿಸಲು ಮತ್ತು ಬಾಕಿ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲು ಪ್ರಸ್ತಾಪಿಸಲಾಗಿದೆ. | | **ಹಾಗೂ** ರೂ.6170.00 ಕೋಟಿಗಳ ಪೈಕಿ, ಪ್ರಸಕ್ತ ಸಾಲಿನ ಡಿಸೆಂಬರ್–2023 ಅಂತ್ಯಕ್ಕೆ ಫಲಾನುಭವಿಗಳ ವಂತಿಕೆಯನ್ನು ಭರಿಸಲು ಹಾಗೂ ಮೂಲಭೂತ ಸೌಕರ್ಯಕ್ಕಾಗಿ ಅಗತ್ಯವಿರುವ ರೂ.745.00 ಕೋಟಿಗಳನ್ನು ಸರ್ಕಾರದಿಂದ ಭರಿಸಲು ಅನುಮೋದನೆ ನೀಡಲಾಗಿದೆ. |

| | | | | |
|---|---|---|---|---|
| 15 | <u>**ಲೋಕೋಪಯೋಗಿ ಇಲಾಖೆ:**</u> ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ರೂ.30.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ಬಾಳುಗೋಡು ಗ್ರಾಮದ ಸ.ನಂ.6/2 ರಲ್ಲಿ ಕೈಗೊಳ್ಳುವುದಕ್ಕಾಗಿ 1.5 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡಿರುತ್ತಾರೆ. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಡಿಕೇರಿ ರವರು ಅನುಮೋದಿತ ನಕ್ಷೆಗನುಸಾರವಾಗಿ ನೆಲ ಮಹಡಿ ಸೇರಿದಂತೆ 5 ಮಹಡಿಗಳೊಂದಿಗೆ 8 ಕೋರ್ಟ್ ಹಾಲ್ ಕಾರ್ಯ ನಿರ್ವಹಿಸಲು ವಿವರವಾದ ಅಂದಾಜನ್ನು ತಯಾರಿಸಲಾಗಿರುತ್ತದೆ. ಅದರಂತೆ ಕಟ್ಟಡವು ಒಟ್ಟು 6205.00 ಚ.ಮೀ ವಿಸ್ತೀರ್ಣ ಹೊಂದಿರುತ್ತದೆ. ಸದರಿ ಅಂದಾಜಿನಲ್ಲಿ ಕೋರ್ಟ್ ಕಾಂಪ್ಲೆಕ್ಸ್ ಕಟ್ಟಡ, ಕಟ್ಟಡದ ಸುತ್ತ ಕಾಂಪೌಂಡ್ ಗೋಡೆ ನಿರ್ಮಾಣ, ಸಂಪರ್ಕ ರಸ್ತೆ ನಿರ್ಮಾಣ ಹಾಗೂ ಅವಶ್ಯಕ ಅಂಶಗಳನ್ನು ಅಳವಡಿಸಲಾಗುತ್ತದೆ. | • ಒಟ್ಟು ಯೋಜನಾ ವೆಚ್ಚ ರೂ.12.00 ಕೋಟಿ. | ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿಯ ರೂ.12.00 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ಒಪ್ಪಿದೆ. |

| | | | | |
|---|---|---|---|---|
| 16 | **<u>ನಗರಾಭಿವೃದ್ಧಿ ಇಲಾಖೆ:</u>** ಬಿ.ಬಿ.ಎಂ.ಪಿ.ಯು ಕೇಂದ್ರ / ರಾಜ್ಯ ಸರ್ಕಾರದ ಆಸ್ತಿಗಳಿಂದ ಬಾಕಿ ಇರುವ ಆಸ್ತಿ ತೆರಿಗೆಯನ್ನು ಒಂದು ಬಾರಿ ಪರಿಹಾರ ಯೋಜನೆ (One-Time Settlement Scheme) ಯಡಿ ವಸೂಲಿ ಮಾಡಲು / ಸಂಗ್ರಹಿಸಲು ಅವಧಿಯನ್ನು ವಿಸ್ತರಿಸುವ ಬಗ್ಗೆ. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕೇಂದ್ರ / ರಾಜ್ಯ ಸರ್ಕಾರದ ಆಸ್ತಿಗಳ ಮೇಲೆ ಬಾಕಿ ಇರುವ ಆಸ್ತಿ ತೆರಿಗೆ / ಸೇವಾ ಶುಲ್ಕವನ್ನು ಸಂಗ್ರಹಿಸಲು ಕೆಲವು ಷರತ್ತುಗಳನ್ನು ವಿಧಿಸಿ 6 ತಿಂಗಳ ಅವಧಿಗೆ ಒಂದು ಬಾರಿ ಪರಿಹಾರ ಯೋಜನೆ (One-Time Settlement Scheme) ಯನ್ನು ಜಾರಿಗೊಳಿಸಲಾಗಿದೆ. | | ಬಿ.ಬಿ.ಎಂ.ಪಿ.ಯು ಕೇಂದ್ರ / ರಾಜ್ಯ ಸರ್ಕಾರದ ಆಸ್ತಿಗಳಿಂದ ಬಿಡಿಎ ಆಸ್ತಿಗಳು ಸೇರಿದಂತೆ ಬಾಕಿ ಇರುವ ಆಸ್ತಿ ತೆರಿಗೆಯನ್ನು / ಸೇವಾ ಶುಲ್ಕವನ್ನು ಸಂಗ್ರಹಿಸಲು ದಿನಾಂಕ: 27.03.2023ರ ಸರ್ಕಾರದ ಆದೇಶದಂತೆ 6 ತಿಂಗಳ ಅವಧಿಗೆ ಜಾರಿಗೆ ತಂದ ಒಂದು ಬಾರಿ ಪರಿಹಾರ ಯೋಜನೆಯ (One-Time Settlement Scheme) ಅವಧಿಯನ್ನು 2023–24ನೇ ಆರ್ಥಿಕ ವರ್ಷದ ಅಂತ್ಯದವರೆಗೆ ಅಂದರೆ ದಿನಾಂಕ: 30.06.2024ರವರೆಗೆ ವಿಸ್ತರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 17 | **<u>ನಗರಾಭಿವೃದ್ಧಿ ಇಲಾಖೆ:</u>** ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಸೂಕ್ತ ಸ್ಥಳ ಗುರುತಿಸಿ ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸುವ ಬಗ್ಗೆ. | ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಕೆಲಸ ನಿರ್ವಹಿಸಲು ಹಲವಾರು ವಾಹನ ಚಾಲಕರು ಮತ್ತು ಕಾರ್ಮಿಕರುಗಳು ಹಾಗೂ ಇತರೆ ಸಾರ್ವಜನಿಕರು ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸಿಕೊಡುವಂತೆ ಕೋರಿರುವ ಹಿನ್ನೆಲೆಯಲ್ಲಿ 02 ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸಲು ಸೂಕ್ತ ಸ್ಥಳವನ್ನು ಗುರುತಿಸಲಾಗಿದೆ. | • ಅಡುಗೆ ಕೋಣೆ ಸಹಿತ ಇಂದಿರಾ ಕ್ಯಾಂಟೀನ್ ರೂ.87.00 ಲಕ್ಷ.<br>• ಇಂದಿರಾ ಕ್ಯಾಂಟೀನ್ ರೂ.48.00 ಲಕ್ಷ. | ಪ್ರಸ್ತುತ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ಮುಂಭಾಗದಲ್ಲಿ ಪಿ7 ಎಂದು ಗುರುತಿಸಲಾಗಿರುವ ವಾಹನ ಪಾರ್ಕಿಂಗ್ ಪ್ರದೇಶದಲ್ಲಿ ಒಂದು ಅಡುಗೆ ಕೋಣೆ ಸಹಿತ ಕ್ಯಾಂಟೀನ್ ಮತ್ತು ಒಂದು ಕ್ಯಾಂಟೀನ್ ಸ್ಥಾಪಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 18 | **<u>ನಗರಾಭಿವೃದ್ಧಿ ಇಲಾಖೆ:</u>** ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ನೆರವಿನ ಯೋಜನೆಯಡಿ ಮಂಗಳೂರು ನಗರದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ 24*7 ನೀರು ಸರಬರಾಜು ಕಾಮಗಾರಿಯಲ್ಲಿ ಹೊಸದಾಗಿ 125 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕವನ್ನು ರೂ.127.70 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಲು ಅನುಮೋದನೆ ನೀಡುವ ಬಗ್ಗೆ. | ಕ್ವಿಮಿಪ್ ಯೋಜನೆಯು ನಗರ ಪ್ರದೇಶಗಳಲ್ಲಿ ಜಲ ಸಂಪನ್ಮೂಲಗಳ ಸಮಗ್ರ ಮತ್ತು ವೈಜ್ಞಾನಿಕ ನಿರ್ವಹಣೆ ಮೂಲಕ ಕರ್ನಾಟಕ ಆಯ್ದ ನದಿ ಜಲಾನಯನ ಪ್ರದೇಶಗಳಲ್ಲಿ ನೀರಿನ ಭದ್ರತೆಯನ್ನು ಸುಧಾರಿಸುವ ಗುರಿ ಹೊಂದಿದೆ. ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು 02 ಟ್ರೇಂಚ್‌ಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. | • ಟ್ರ್ಯಾಂಚ್–1 ದಾವಣಗೆರೆ, ಹರಿಹರ, ರಾಣಿಬೆನ್ನೂರು ಮತ್ತು ಬ್ಯಾಡಗಿ.<br>• ಟ್ರ್ಯಾಂಚ್–2, ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ. | ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ನೆರವಿನ ಯೋಜನೆಯಡಿ ಮಂಗಳೂರು ನಗರದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ 24*7 ನೀರು ಸರಬರಾಜು ಕಾಮಗಾರಿಯಲ್ಲಿ ಹೊಸದಾಗಿ 125 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕವನ್ನು ರೂ.127.70 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಲು ಅನುಮೋದನೆ ನೀಡಿದೆ. |

| | | | | |
|---|---|---|---|---|
| 19 | **<u>ಜಲಸಂಪನ್ಮೂಲ ಇಲಾಖೆ:</u>** ಕರ್ನಾಟಕ ನೀರಾವರಿ (ನೀರಿನ ಕರ ವಿಧಿಸುವಿಕೆ) ನಿಯಮಗಳು, 1965ಕ್ಕೆ ತಿದ್ದುಪಡಿ ಮಾಡುವ ಬಗ್ಗೆ. | ನೀರಾವರಿ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವನ್ನು ಮರುಪಡೆಯಲು ದರಗಳ ಪರಿಷ್ಕರಣೆಗಾಗಿ ಮತ್ತು ಕುಡಿಯುವ ನೀರು ಹಾಗೂ ಕೈಗಾರಿಕೆಗಳಿಗೆ ವಿವಿಧ ಮೂಲಗಳಿಂದ ಒದಗಿಸುವ ನೀರಿನ ದರಗಳ ಪರಿಷ್ಕರಣೆಗಾಗಿ ಪ್ರಸ್ತಾಪಿಸಲಾಗಿತ್ತು. | | ನೀರಿನ ಕರ ದರವನ್ನು ಇನ್ನು ಮುಂದೆ ವಾರ್ಷಿಕ ಹಣದುಬ್ಬರ ಸೂಚ್ಯಾಂಕಕ್ಕೆ ಸಂವಾದಿಯಾಗಿ ಹೆಚ್ಚಳ ಮಾಡುವ ಷರತ್ತಿನೊಂದಿಗೆ ಕರ್ನಾಟಕ ನೀರಾವರಿ (ನೀರಿನ ಕರ ವಿಧಿಸುವಿಕೆ) ನಿಯಮಗಳು, 1965 ಕ್ಕೆ ತಿದ್ದುಪಡಿ ಮಾಡಲು ದರಗಳನ್ವಯ ಅಂತಿಮ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.<br>• ಗೃಹ ಬಳಕೆ ನೀರಿಗೆ. ಪ್ರತಿ ಎಂ.ಸಿ.ಎಫ್.ಟಿ.ಗೆ ರೂ.320/– ರಾಜ್ಯಧನ<br>• ಕಾಲುವೆಗಳು, ಕೆರೆಗಳು, ಜಲಾಶಯ ಇತ್ಯಾದಿಗಳಿಂದ ಒದಗಿಸುವ ನೀರಿಗೆ – ಪ್ರತಿ ಎಂ.ಸಿ.ಎಫ್.ಟಿ ರೂ.3.00 ಲಕ್ಷ ರಾಜಧನ. |

| | | | | |
|---|---|---|---|---|
| | | | | • ನೈಸರ್ಗಿಕ ಜಲಮಾರ್ಗಗಳು, ನದಿ, ಹಳ್ಳಗಳಿಂದ – ಪ್ರತಿ ಎಂ.ಸಿ.ಎಫ್.ಟಿ ರೂ.1.50 ಲಕ್ಷ ರಾಜಧನ.<br>ನಿಗದಿಪಡಿಸಲು ಸಚಿವ ಸಂಪುಟ ಅನುಮೋದಿಸಿದೆ. |

| | | | | |
|---|---|---|---|---|
| 20 | **<u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ:</u>** ಕರ್ನಾಟಕ ವಿಧಾನಮಂಡಲದ ಉಭಯ ಸದನಗಳ ಅಧಿವೇಶನವನ್ನು ಸಮಾಪನಗೊಳಿಸುವ ಬಗ್ಗೆ. | | | ಬೆಳಗಾವಿಯಲ್ಲಿ ಕರೆಯಲಾದ ವಿಧಾನಮಂಡಲದ ಅಧಿವೇಶವನ್ನು ಸಮಾಪನ ಮಾಡಲು ರಾಜ್ಯಪಾಲರಿಗೆ ಶಿಫಾರಸ್ಸು ಮಾಡಲು ಸಚಿವ ಸಂಪುಟ ಅನುಮೋದನೆ ನೀಡಿದೆ. |

| | | | | |
|---|---|---|---|---|
| 21 | **ಕೋವಿಡ್ ಕುರಿತು ಚರ್ಚೆ** | | | ಕೋವಿಡ್ ಕುರಿತು ಕೋವಿಡ್ ಮಾರಕ ರೋಗ ನಿಯಂತ್ರಣ ಕುರಿತು ಕಾಲಕಾಲಕ್ಕೆ ಕೈಗೊಂಡ ಕ್ರಮಗಳನ್ನು ಮೇಲುಸ್ತುವಾರಿ ಮಾಡಲು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರ ನೀಡಲಾಯಿತು. |